# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 760 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20.12.2021 |
| ಉತ್ತರಿಸುವ ಸಚಿವರು | : | ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು<br>ಜೀವಿಶಾಸ್ತ್ರ ಸಚಿವರು |

*****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ನಗರ ವ್ಯಾಪ್ತಿಯಲ್ಲಿ ಬರುವ ಶಿಕಾರಗ ಮತ್ತು ಕರೇಜ್ ಪುನರುತ್ಥಾನ, ಹಾಗೂ ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; | ಬೀದರ್ ನಗರದ ವ್ಯಾಪ್ತಿಯಲ್ಲಿ ಬರುವ ಶಿಕಾರಗ ಮತ್ತು ಕರೇಜ್ ಪುನರುತ್ಥಾನ, ಕರೇಜ್‌ದಲ್ಲಿ ಹೂಳು ತೆಗೆಯುವುದು, ಸುತ್ತುಗೋಡೆ, ನೀರು ಶುದ್ಧೀಕರಣ, ಕಿಂಡಿಗಳ ಸಂರಕ್ಷಣೆ, ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಹಾಗೂ ಉದ್ಯಾನವನ ಕಾಮಗಾರಿಯನ್ನು 2015-16ನೇ ಸಾಲಿನಲ್ಲಿ ರೂ.300.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ನೀಡಿರುವ ಅನುಮೋದನೆಯನ್ನು ಮಾರ್ಪಡಿಸಿ, 2016-17ನೇ ಸಾಲಿನಲ್ಲಿ ರೂ.270.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಪರಿಷ್ಕೃತ ಮಂಜೂರಾತಿಯನ್ನು ನೀಡಲಾಗಿತ್ತು. ಅದರಂತೆ, ಈ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೊದಲ ಕಂತಾಗಿ ರೂ.50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಬೀದರ್ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿತ್ತು. ಆದರೆ, ಈ ಕಾಮಗಾರಿಗೆ ಲೋಕೋಪಯೋಗಿ ಇಲಾಖೆ, ಬೀದರ್ ಜಿಲ್ಲೆಯಿಂದ ಎರಡು ಬಾರಿ ಟೆಂಡರ್ ಕರೆಯಲಾಗಿದ್ದು, ಈ ಎರಡು ಟೆಂಡರ್‌ಗಳಲ್ಲಿ ಅರ್ಹ ಗುತ್ತಿಗೆದಾರರು ಆಯ್ಕೆಯಾಗಿರುವುದಿಲ್ಲ. ಸದರಿ ಕಾಮಗಾರಿಯನ್ನು ಪ್ರಾರಂಭಿಸದಿರುವುದರಿಂದ ಸರ್ಕಾರದ ಆದೇಶ ದಿನಾಂಕ: 20.07.2019ರಲ್ಲಿ ರದ್ದುಪಡಿಸಲಾಗಿದೆ.<br><br>ಈ ಕಾಮಗಾರಿಗೆ ಬಿಡುಗಡೆ ಮಾಡಿರುವ ರೂ.50.00 ಲಕ್ಷಗಳನ್ನು ಬೀದರ್ ನಗರದ ಶ್ರೀ ಬಸವ ಸೇವಾ ಪ್ರತಿಷ್ಠಾನ ಶರಣನಗರ ಬಳಿ ಯಾತ್ರಿ ನಿವಾಸ ನಿರ್ಮಾಣ ಕಾಮಗಾರಿಗೆ ಬಿಡುಗಡೆ ಮಾಡಲು 2021-22ನೇ ಸಾಲಿನ ಮುಂದುವರೆದ ಕಾಮಗಾರಿಗಳ ಕ್ರಿಯಾ ಯೋಜನೆಯಲ್ಲಿ ಅನುಮೋದನೆ ನೀಡಲಾಗಿದೆ. |
| ಆ) | ಈ ಕಾಮಗಾರಿಗಾಗಿ ಮಂಜೂರಾದ ಹಣ ಏನಾಯಿತು ಯಾವ ಕಾಮಗಾರಿಗೆ ಉಪಯೋಗಿಸಲಾಗಿದೆ; | |
| ಇ) | ಬೀದರ್ ಕಲಬುರಗಿ ಹಾಗೂ ಬಿಜಾಪೂರದಲ್ಲಿರುವ ಸ್ಮಾರಕ ಮತ್ತು ಕೋಟೆಗಳನ್ನು ಒಳಗೊಂಡಂತೆ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಮಂತ್ರಾಲಯ ದಿಂದ ಯುನೇಸ್ಕೋ ಅಂಗ ಸಂಸ್ಥೆಗೆ ಸಲ್ಲಿಸಲಾದ ಕೆಲಸ ಯಾವ ಹಂತದಲ್ಲಿದೆ: | ಬೀದರ್, ಕಲಬುರಗಿ ಹಾಗೂ ವಿಜಯಪುರದಲ್ಲಿರುವ ಸ್ಮಾರಕಗಳು ಮತ್ತು ಕೋಟೆಗಳನ್ನು ಒಳಗೊಂಡಂತೆ " Monuments and Forts of Deccan Sultanate " ಎಂಬ ಶೀರ್ಷಿಕೆಯಡಿ ವಿಶ್ವ ಪರಂಪರೆ ತಾತ್ಕಾಲಿಕ ಪಟ್ಟಿಗೆ ಆಯ್ಕೆಗೊಂಡಿರುವ ತಾಣವನ್ನು ಅಂತಿಮ ಪಟ್ಟಿ ಸೇರ್ಪಡೆಗೆ ಡೋಸಿಯರ್ ಮತ್ತು ಸೈಟ್ ಮ್ಯಾನೇಜ್‌ಮೆಂಟ್ ಪ್ಲಾನ್‌ನ್ನು ಪುರಾತತ್ವ ಇಲಾಖೆಯ ವತಿಯಿಂದ ಸಿದ್ಧಪಡಿಸಿ, ಸನ್ಮಾನ್ಯ ಮುಖ್ಯಮಂತ್ರಿಗಳ ಶಿಫಾರಸ್ಸಿನೊಂದಿಗೆ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಮುಖಾಂತರ ವಿಶ್ವಪರಂಪರೆ ಪಟ್ಟಿಯ ಆಯ್ಕೆ ಸಮಿತಿಯ ಪರಿಶೀಲನೆಗೆ ಫೆಬ್ರವರಿ-2020ರಲ್ಲಿ ಸಲ್ಲಿಸಲಾಗಿದೆ.<br><br>ಆದರೆ, 2020-21ನೇ ಸಾಲಿನಲ್ಲಿ ಅಂತಿಮ ಹಂತದ ಎರಡು ತಾಣಗಳ ಪೈಕಿ, ಭಾರತದ ಗುಜರಾತ್ ರಾಜ್ಯದ ಕಛ್ ಜಿಲ್ಲೆಯ ಖಾದಿರ್ ಬೇಟದಲ್ಲಿರುವ ದೋಳಾವೀರ ತಾಣವು ವಿಶ್ವಪರಂಪರೆ ಪಟ್ಟಿಗೆ ಸೇರ್ಪಡೆಗೊಂಡಿರುತ್ತದೆ.<br><br>ಆದರೆ, ಬೀದರ್, ಕಲಬುರಗಿ ಹಾಗೂ ವಿಜಯಪುರದಲ್ಲಿರುವ ಸ್ಮಾರಕಗಳು ಮತ್ತು ಕೋಟೆಗಳನ್ನು ಒಳಗೊಂಡಂತೆ " Monuments and Forts of Deccan Sultanate " ಸೇರ್ಪಡೆಯಾಗಿರುವುದಿಲ್ಲ. |

**ಈ)** 2015-2016ನೇ ಸಾಲಿನಲ್ಲಿ ಕೇಂದ್ರದ HRIDAY (ಹೆರಿಟೇಜ್ ಸಿಟಿ ಡೆವಲಪ್ಮೆಂಟ್ ಅಂಡ್ ಅಗ್ಯುಮೆಂಟೇಷನ್ ಯೋಜನೆ) ಅಡಿಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾದ ಪ್ರಸ್ತಾವನೆಯು, ಕಾರ್ಯದರ್ಶಿ ಪೌರಾಡಳಿತ ಹಾಗೂ ನಗರಾಭಿವೃದ್ಧಿ ಇಲಾಖೆ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; ಇಲ್ಲವಾದಲ್ಲಿ, ಕಾರಣ ತಿಳಿಸುವುದು;

ಕೇಂದ್ರ ಪುರಸ್ಕೃತ "ಹೃದಯ್" ಯೋಜನೆಯಡಿ ಕೇಂದ್ರ ಸರ್ಕಾರವು ಬಾದಾಮಿ ಪುರಸಭೆಯನ್ನು ಹೊರತುಪಡಿಸಿ, ರಾಜ್ಯದ ಬೇರೆ ಯಾವುದೇ ನಗರಗಳನ್ನು ಆಯ್ಕೆ ಮಾಡಿರುವುದಿಲ್ಲ. ಕೆ.ಯು.ಐ.ಡಿ.ಎಫ್.ಸಿ. ಸಂಸ್ಥೆಯು ಹೃದಯ್ ಯೋಜನೆಗೆ ನೋಡಲ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಿದೆ. ಪ್ರಸ್ತುತ ಈ ಯೋಜನೆಯಡಿ ಬಾದಾಮಿ ಪಟ್ಟಣದಲ್ಲಿ ಕೈಗೊಂಡಿರುವ ಕಾಮಗಾರಿಯ ಅನುಷ್ಠಾನದ ಪ್ರಗತಿ ವಿವರ ಕೆಳಕಂಡಂತಿದೆ:

| ಕ್ರ. ಸಂ. | ಕಾಮಗಾರಿಯ ಹೆಸರು | ಮೊತ್ತ | ಷರಾ |
|---|---|---|---|
| **ಅ) ಬಾದಾಮಿ ಅನುಷ್ಠಾನಗೊಳಿಸಿರುವ ಕಾಮಗಾರಿಗಳು** | | | |
| 1. | ತಟ್ಟೆಕೊಟ್ಟೆ - ಒಳಚರಂಡಿ ಕಾಮಗಾರಿ | 10.74 ಕೋಟಿ | ಎಲ್ಲಾ 4 ಕಾಮಗಾರಿಗಳು |
| 2. | ಬಾದಾಮಿ ರಸ್ತೆಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆ ಸಾರಿಗೆ ಮೂಲಸೌಕರ್ಯ ಮತ್ತು ಸಂಕೇತಗಳನ್ನು ಅಳವಡಿಸುವುದು | | |
| 3. | ಪಾದಚಾರಿ ಮಾರ್ಗಗಳು/ ಹ್ಯಾಂಡ್ ರೈಲ್ ಮತ್ತು ರಸ್ತೆ ಸುಧಾರಣೆ ಕಾಮಗಾರಿಗಳು | | |
| 4. | ಘನ ತ್ಯಾಜ್ಯ ನಿರ್ವಹಣೆ (ಶೂನ್ಯ ತ್ಯಾಜ್ಯ ನಿರ್ವಹಣೆ) | | |
| **ಆ) ಸಿಪಿಡಬ್ಲ್ಯುಡಿ ವತಿಯಿಂದ ಅನುಷ್ಠಾನಗೊಳಿಸಿರುವ ಕಾಮಗಾರಿಗಳು** | | | |
| 1. | ಕಮಾನುಗಳು | 8.02 ಕೋಟಿ | ಪೂರ್ಣಗೊಂಡಿರುತ್ತದೆ |
| 2. | ನಾಮಫಲಕ ಮತ್ತು ಜಂಕ್ಷನ್ ಸುಧಾರಣೆ | | ಪ್ರಗತಿಯಲ್ಲಿರುತ್ತದೆ |
| 3. | ಆಧುನಿಕ ಶೌಚಾಲಯ | | ಪೂರ್ಣಗೊಂಡಿರುತ್ತದೆ |

**ಉ)** ಬೀದರ್‌ನ ಗೋರನಳ್ಳಿ ಗ್ರಾಮ ಹಾಗೂ ನೌಬಾದನಲ್ಲಿರುವ ಕೆರೆಗಳ ಅತಿಕ್ರಮಣ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ; ಈ 2 ಕೆರೆಗಳಿಗೆ ನೀರು ಪೂರೈಸುವ ಹಳ್ಳಗಳ (ಫಸ್ಟ್ ಆರ್ಡರ್ ಸ್ಟ್ರೀಮ್ಸ್) ಮಾಹಿತಿ ಇದೆಯೇ; ಈ ಕೆರೆಗಳ ಸಂರಕ್ಷಣೆಗಾಗಿ ಸರ್ಕಾರ ತೆಗೆದುಕೊಳ್ಳುವ ಇರೋ ಕ್ರಮಗಳ ಮಾಹಿತಿ ಒದಗಿಸುವುದು?

ಬೀದರ್ ನಗರದ ಗೋರನಳ್ಳಿ ಗ್ರಾಮ ಹಾಗೂ ನೌಬಾದ ವ್ಯಾಪ್ತಿಯಲ್ಲಿರುವ ಕೆರೆಗಳ ಸರ್ವೆ ಕಾರ್ಯವು ADLR(Assistant Director of Land Records)ರವರಿಂದ ನಡೆಯುತ್ತಿದ್ದು, ಸರ್ವೇ ಮುಗಿದು ಗಡಿಗಳನ್ನು ಗುರುತಿಸಿದ ನಂತರ ಕೆರೆ ಒತ್ತುವರಿಯಾಗಿದ್ದಲ್ಲಿ, ಒತ್ತುವರಿ ತೆರವುಗೊಳಿಸಿ ಸಂರಕ್ಷಣೆ ಕಾಮಗಾರಿ ಕೈಗೊಳ್ಳಲಾಗುವುದು.

ಸಂಖ್ಯೆ: **TOR 324 TDV 2021**

**(ಆನಂದ್ ಸಿಂಗ್)**
ಪ್ರವಾಸೋದ್ಯಮ ಹಾಗೂ ಪರಿಸರ
ಮತ್ತು ಜೀವಿಶಾಸ್ತ್ರ ಸಚಿವರು